ದೂರವಾಣಿ ಸಂಖ್ಯೆ:2419677/2419936
ಫ್ಯಾಕ್ಸ್: 0821-2419363/2419301

email : registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ : 1916

ವಿಶ್ವವಿದ್ಯಾನಿಲಯಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು-570005

**ಸಂಖ್ಯೆ:ಎಸಿ7 (ಎ)/263/2021-22** **ದಿನಾಂಕ: 06.11.2024**

## ಸುತ್ತೋಲೆ

ವಿಷಯ:- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಬಾಕಿ ಇರುವ ಪ್ರವೇಶಾತಿ ಶುಲ್ಕ ಪಾವತಿಸದಿರುವ ಬಗ್ಗೆ.

ಉಲ್ಲೇಖ:- 1) ಭಾರತ ಸರ್ಕಾರದ 'Post Matric Scholarships to the Students belonging to Scheduled Castes for Studies in India (2020-21 to 2025-26)' ಮಾರ್ಗಸೂಚಿ.

2) ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:SWD/EDU/ED3/91/2023 Com:1098854), ಬೆಂಗಳೂರು, ದಿನಾಂಕ 03-07-2023.

3) ವಿಶ್ವವಿದ್ಯಾನಿಲಯದ ಸುತ್ತೋಲೆಗಳ ಸಂಖ್ಯೆ:ಎಸಿ-9/59/2021-22, ದಿನಾಂಕ 21-05-2024 ಮತ್ತು 10-07-2024.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಹಲವು ಕಾಲೇಜುಗಳಲ್ಲಿ 2018-19ನೇ ಸಾಲಿನಿಂದ 2023-24ನೇ ಸಾಲಿನವರೆಗೂ ಪರಿಶಿಷ್ಟ ಜಾತಿ/ಪ.ಪಂಗಡದ ವಿದ್ಯಾರ್ಥಿಗಳ ಶುಲ್ಕಗಳು ವಿಶ್ವವಿದ್ಯಾನಿಲಯಕ್ಕೆ ಸಂದಾಯವಾಗದೇ ಬಾಕಿ ಉಳಿದಿರುತ್ತವೆ. ಈ ಹಿನ್ನೆಲೆಯಲ್ಲಿ ಈ ಮುಂದಿನ ವಿವರಗಳನ್ನು ನಿಮ್ಮ ಗಮನಕ್ಕೆ ತರಲಾಗಿದೆ.

ಉಲ್ಲೇಖ(1)ರಲ್ಲಿ ಸೂಚಿಸಿರುವ ಭಾರತ ಸರ್ಕಾರದ 'Post Matric Scholarships to the Students belonging to Scheduled Castes for Studies in India (2020-21 to 2025-26) ಮಾರ್ಗಸೂಚಿಯ ಅನುಸಾರ ಹಾಗೂ ಕರ್ನಾಟಕ ರಾಜ್ಯದ ಸಮಾಜ ಕಲ್ಯಾಣ ಇಲಾಖೆಯ ಉಲ್ಲೇಖ(2)ರಲ್ಲಿನ ಆದೇಶಾನುಸಾರ ಪರಿಶಿಷ್ಟ ಜಾತಿ/ಪಂಗಡದ ವಿದ್ಯಾರ್ಥಿಗಳು ಪ್ರವೇಶಾತಿ ಸಮಯದಲ್ಲಿ ಪ್ರವೇಶಾತಿ ಶುಲ್ಕ ಪಾವತಿಸದೇ ಪ್ರವೇಶಾತಿ ಹೊಂದಬಹುದಾಗಿರುತ್ತದೆ. ನಿಮ್ಮ ಕಾಲೇಜುಗಳಲ್ಲಿ ಸರ್ಕಾರದ ಈ ಆದೇಶಗಳ ಅನುಸಾರ ಕ್ರಮವಹಿಸದೇ, 2018-19ನೇ ಶೈಕ್ಷಣಿಕ ವರ್ಷದಿಂದ 2023-24ನೇ ಶೈಕ್ಷಣಿಕ ವರ್ಷದವರೆಗೆ ಪರಿಶಿಷ್ಟ ಜಾತಿ/ಪಂಗಡಗಳ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಪ್ರವೇಶಾತಿ ಶುಲ್ಕಗಳು ವಿಶ್ವವಿದ್ಯಾನಿಲಯಕ್ಕೆ ಪಾವತಿಯಾಗದೇ ಬಾಕಿ ಉಳಿದಿರುತ್ತವೆ.

ಉಲ್ಲೇಖ(3)ರಲ್ಲಿನ ವಿಶ್ವವಿದ್ಯಾನಿಲಯದ ದಿನಾಂಕ 21-05-2024ರ ಸುತ್ತೋಲೆಯಲ್ಲಿ ಈ ವಿಷಯವಾಗಿ ಆದ್ಯತೆಯ ಮೇರೆಗೆ ಕ್ರಮವಹಿಸುವಂತೆ ತಿಳಿಸಿದ್ದಾಗ್ಯೂ ಸಹ ನಿಮ್ಮಿಂದ ಕ್ರಮವಹಿಸಿರುವ ಬಗ್ಗೆ ಯಾವುದೇ ದಾಖಲೆಗಳು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಕೆಯಾಗಿರುವುದಿಲ್ಲ. ಇದಲ್ಲದೇ, 2024-25ನೇ ಸಾಲಿನ ಪ್ರವೇಶಾತಿಗಳನ್ನು ಅನುಮೋದನೆಗಾಗಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವ ಬಗ್ಗೆ ಹೊರಡಿಸಿರುವ ದಿನಾಂಕ 10-07-2024ರ (ಉಲ್ಲೇಖ-3) ಸುತ್ತೋಲೆಯ ಕಂಡಿಕೆ 09ರಲ್ಲಿಯೂ ಸಹ ಈ ಮುಂದಿನಂತೆ ಸ್ಪಷ್ಟವಾಗಿ ನಮೂದಿಸಲಾಗಿದೆ.

> "ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯಕ್ಕೆ ಪಾವಿಸಬೇಕಾಗಿರುವ ಪ್ರವೇಶ ಶುಲ್ಕಗಳ ವಿವರವನ್ನು (ಪಟ್ಟಿ ಮತ್ತು ಶುಲ್ಕದ ಮೊತ್ತವನ್ನು) ಪ್ರತ್ಯೇಕವಾಗಿ ಪಟ್ಟಿ ಮಾಡಿ ಸಲ್ಲಿಸಬೇಕು ಹಾಗೂ ಈ ಹಿಂದಿನ ಶೈಕ್ಷಣಿಕ ಸಾಲಿನಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ಮರುಪಾವತಿಸಿದ ಬಾಬ್ತು ವಿಶ್ವವಿದ್ಯಾನಿಲಯಕ್ಕೆ ಪಾವತಿಸಿದ ಚಲನ್ ಅನ್ನು ಪ್ರವೇಶಾತಿ ಅನುಮೋದನೆ ಪಟ್ಟಿಯೊಂದಿಗೆ ಸಲ್ಲಿಸುವುದು."

ಮೇಲ್ಕಂಡ ಸುತ್ತೋಲೆಗೆ ಪ್ರತಿಯಾಗಿ ಪ್ರಸಕ್ತ ವರ್ಷ ಪ್ರವೇಶಾತಿ ಅನುಮೋದನೆಗೆ ಸಲ್ಲಿಸಿರುವ ಪತ್ರಗಳಲ್ಲಿ ಸಹ ಹಿಂದಿನ ವರ್ಷಗಳ ಬಾಕಿ ಶುಲ್ಕಗಳ ಪಾವತಿಯ ಬಗ್ಗೆ ಯಾವುದೇ ಮಾಹಿತಿ ನೀಡಿರುವುದಿಲ್ಲ. ಈ ಎಲ್ಲ ವಿವರಗಳನ್ನು ಹಲವಾರು ಬಾರಿ ದೂರವಾಣಿಯ ಮುಖಾಂತರ ತಿಳಿಸಲಾಗಿದೆ. ಉಲ್ಲೇಖಿತ 1 ಮತ್ತು 2ರಲ್ಲಿನ ಸೂಚಿಸಿರುವ ಭಾರತ ಸರ್ಕಾರದ ಮಾರ್ಗಸೂಚಿ ಮತ್ತು ರಾಜ್ಯ ಸರ್ಕಾರದ ಆದೇಶಗಳ ರೀತ್ಯಾ ವಿದ್ಯಾರ್ಥಿಗಳ ಖಾತೆಗೆ ಸ್ಕಾಲರ್‌ಶಿಪ್ ಬಿಡುಗಡೆಯಾದ ಕೂಡಲೇ ಮರುಪಾವತಿ ಮಾಡಿಸಿಕೊಳ್ಳುವ ಸಂಬಂಧ ಕ್ರಮ ಕೈಗೊಳ್ಳದಿರುವ ಹಾಗೂ ವಿಶ್ವವಿದ್ಯಾನಿಲಯಕ್ಕೆ ಶುಲ್ಕ ಪಾವತಿಯಾಗದಿರುವ ಬಗ್ಗೆ ಆಡಿಟ್ ಆಕ್ಷೇಪಣೆ ವ್ಯಕ್ತವಾಗಿರುತ್ತದೆ. ಇಂತಹ ಯಾವುದೇ ಕಾರಣಗಳಿಂದ, ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಗೆ ಯಾವುದೇ ತೊಂದರೆಯಾದಲ್ಲಿ ಅದಕ್ಕೆ ಪ್ರಾಂಶುಪಾಲರೇ ನೇರ ಹೊಣೆಗಾರರಾಗಿರುತ್ತಾರೆ ಎಂದು ಈ ಮೂಲಕ ಮತ್ತೊಮ್ಮೆ ತಿಳಿಸಲಾಗಿದೆ.

Scanned with ACE Scanner

ಮಂಡ್ಯ, ಹಾಸನ ಮತ್ತು ಚಾಮರಾಜನಗರ ಜಿಲ್ಲೆಯ ಕಾಲೇಜುಗಳು ಮುಂದಿನ ಶೈಕ್ಷಣಿಕ ವರ್ಷದಿಂದ ಆಯಾ ಜಿಲ್ಲೆಯ ವಿಶ್ವವಿದ್ಯಾನಿಲಯಗಳ ವ್ಯಾಪ್ತಿಗೆ ಸಂಪೂರ್ಣವಾಗಿ ಒಳಪಡುವುದರಿಂದ ಮತ್ತು ಮೈಸೂರು ವಿಶ್ವವಿದ್ಯಾನಿಲಯದೊಡನೆ ಇದೇ ಕೊನೆಯ ವರ್ಷವಾಗಿರುವುದರಿಂದ ಕಳೆದ ಶೈಕ್ಷಣಿಕ ವರ್ಷಗಳಿಂದ ಬಾಕಿ ಇರುವ ಪರಿಶಿಷ್ಟ ಜಾತಿ/ಪಂಗಡದ ವಿದ್ಯಾರ್ಥಿಗಳಿಂದ ಮರುಪಾವತಿ ಮಾಡಿಸಿಕೊಂಡಿರುವ ಶುಲ್ಕವನ್ನು ವಿಶ್ವವಿದ್ಯಾನಿಲಯಕ್ಕೆ ಪಾವತಿಸುವ ಸಂಬಂಧ ಆದ್ಯತೆಯ ಮೇರೆಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ತಿಳಿಸಲಾಗಿದೆ.

ಮುಂದುವರೆದು, 2024–25ನೇ ಶೈಕ್ಷಣಿಕ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿರುವ ತೃತೀಯ ವರ್ಷದ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ವಿದ್ಯಾರ್ಥಿವೇತನ ಬಿಡುಗಡೆಯಾದ ಕೂಡಲೇ ನಿಯಮಾನುಸಾರ ಏಳು ದಿನಗಳ ಒಳಗೆ ಮರುಪಾವತಿ ಮಾಡಿಸಿಕೊಂಡು ವಿಶ್ವವಿದ್ಯಾನಿಲಯಕ್ಕೆ ಪಾವತಿ ಮಾಡಲು ಕ್ರಮವಹಿಸುವಂತೆ ಸಹ ಸೂಚಿಸಲಾಗಿದೆ.

ಉಪಕುಲಸಚಿವರು(ಶೈಕ್ಷಣಿಕ)

ಇವರಿಗೆ;
ಮಂಡ್ಯ, ಹಾಸನ ಮತ್ತು ಚಾಮರಾಜನಗರದ
ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ

ಪ್ರತಿ

1) ಮಾನ್ಯ ಕುಲಪತಿ/ಕುಲಸಚಿವರ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
2) ಕಛೇರಿ ಕಡತ

Scanned with ACE Scanner